All India Radio: Bangalore

National Bulletin In Kannada

01.07.2025 7.35AM

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಉತ್ತರಪ್ರದೇಶದಲ್ಲಿಂದು ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು
- ವಾಷಿಂಗ್ಟನ್ ಡಿ.ಸಿ.ಯಲ್ಲಿಂದು ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲಿರುವ ಸಚಿವ ಡಾ. ಎಸ್. ಜೈಶಂಕರ್
- ಇಂದಿನಿಂದ ಜಾರಿಗೆ ಬರುವಂತೆ ಪ್ರಯಾಣಿಕ ರೈಲು ಸೇವೆಗಳ ಮೂಲ ದರ ಹೆಚ್ಚಿಸಲು ರೈಲ್ವೆ ಸಚಿವಾಲಯ ನಿರ್ಧಾರ
- ವಿದ್ಯಾರ್ಥಿಗಳಲ್ಲಿ ಕ್ರೀಡಾ ಸಂಸ್ಕೃತಿ ಬೆಳೆಸಲು ದೇಶಾದ್ಯಂತ ೧೦ ಲಕ್ಷ ಫುಟ್ಬಾಲ್‌ಗಳ ವಿತರಣೆ
- ಕೆನಡಾ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ ಆರಂಭ; ಪ್ರಶಸ್ತಿ ಗೆಲ್ಲುವ ತವಕದಲ್ಲಿ ಭಾರತೀಯ ಶಟ್ಲರ್‌ಗಳು

><><><><><><><><><

ಉತ್ತರ ಪ್ರದೇಶ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಗೋರಖ್‌ಪುರದಲ್ಲಿಂದು ಮೊದಲ ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಈ ವೇಳೆ ಉತ್ತರಪ್ರದೇಶ ರಾಜ್ಯಪಾಲರಾದ ಆನಂದಿಬೇನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉಪಸ್ಥಿತರಿರಲಿದ್ದಾರೆ. ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ  ಸೇರಿದಂತೆ ಸಾಂಪ್ರದಾಯಿಕ ಔಷಧಿ ಪದ್ಧತಿಗಳಲ್ಲಿ ಚಿಕಿತ್ಸೆ ಮತ್ತು ಶಿಕ್ಷಣ ನೀಡುವ ಪ್ರಮುಖ ಕೇಂದ್ರವಾಗಲಿದೆ. ೨೦೨೧ರಲ್ಲಿ ಅಗಸ್ಟ್ ೨೮ ರಂದು ಅಂದಿನ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಈ ವಿಶ್ವವಿದ್ಯಾಲಯದ ಶಂಕುಸ್ಥಾಪನೆ ನೆರವೇರಿಸಿದ್ದರು. ೫೨ ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಈ ವಿಶ್ವವಿದ್ಯಾಲಯವನ್ನು ೨೬೭ ಕೋಟಿ ರೂಪಾಯಿಗಿಂತಲೂ ಹೆಚ್ಚಿನ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಬಳಿಕ ರಾಷ್ಟ್ರಪತಿ ಮುರ್ಮು ಅವರು ಗೊರಖನಾಥ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಬಳಿಕ ಅವರು ಸೋನ್‌ಬರ್ಸಾದಲ್ಲಿರುವ ಮಹಾಯೋಗಿ ಗೊರಖನಾಥ್ ವಿಶ್ವವಿದ್ಯಾಲಯದ ಆರೋಗ್ಯಧಾಮ್ ಆವರಣದಲ್ಲಿ ನೂತನ ಶೈಕ್ಷಣಿಕ ಸಂಕೀರ್ಣ, ಸಭಾಂಗಣ, ಪಂಚಕರ್ಮ ಕೇಂದ್ರ ಉದ್ಘಾಟಿಸುವ ಜೊತೆಗೆ ವಿದ್ಯಾರ್ಥಿನಿಯರ ವಸತಿ ನಿಲಯದ ಶಿಲಾನ್ಯಾಸ ನೆರವೇರಿಸಲಿದ್ದಾರೆ. ರಾಷ್ಟ್ರಪತಿ ಅವರ ಪ್ರವಾಸದ ಹಿನ್ನೆಲೆಯಲ್ಲಿ ಬರೆಲೀ ಮತ್ತು ಗೊರಖ್‌ಪುರದಲ್ಲಿ ಕಠಿಣ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

><><><><><><><><><

ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಇಂದು ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಯಲ್ಲಿ ನಡೆಯುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಕಳೆದ ಜನವರಿ ೨೧ರಂದು ವಾಷಿಂಗ್ಟನ್‌ನಲ್ಲಿ ಆಯೋಜಿಸಲಾಗಿದ್ದ ಇತ್ತೀಚಿನ ವಿದೇಶಾಂಗ ಸಚಿವರ ಸಭೆಯಲ್ಲಿ ನಡೆದ ಚರ್ಚೆಗಳನ್ನು ಮುಂದುವರಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯ

ತಿಳಿಸಿದೆ. ಸಭೆಯಲ್ಲಿ, ಸಚಿವರು ಪ್ರಾದೇಶಿಕ ಹಾಗೂ ಜಾಗತಿಕ ಬೆಳವಣಿಗೆಗಳ ಕುರಿತು ವಿಶೇಷವಾಗಿ ಇಂಡೋ-ಪೆಸಿಫಿಕ್ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲಿದ್ದಾರೆ. ಇದರ ಜೊತೆಗೆ ಭಾರತ ಆತಿಥ್ಯ ವಹಿಸಲಿರುವ ಮುಂದಿನ ಕ್ವಾಡ್ ನಾಯಕರ ಶೃಂಗಸಭೆಗೆ ಪೂರ್ವಭಾವಿಯಾಗಿ ವಿವಿಧ ಕ್ವಾಡ್ ಉಪಕ್ರಮಗಳ ಪ್ರಗತಿಯನ್ನೂ ಪರಿಶೀಲಿಸಲಾಗುವುದು. ಮುಕ್ತ ಇಂಡೋ-ಪೆಸಿಫಿಕ್ ಪ್ರದೇಶದ ಕುರಿತು ಸಾಮಾನ್ಯ ದೃಷ್ಟಿಕೋನವನ್ನು ಇನ್ನಷ್ಟು ಉತ್ತೇಜಿಸಲು ನೂತನ ಯೋಜನೆಗಳ ಕುರಿತಾದ ಚರ್ಚೆಗಳೂ ನಡೆಯುವ ನಿರೀಕ್ಷೆಯಿದೆ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರುಬಿಯೋ ಅವರು ಈ ಸಭೆಯ ಆತಿಥ್ಯ ವಹಿಸಲಿದ್ದು, ಆಸ್ಟ್ರೇಲಿಯಾದ ವಿದೇಶಾಂಗ ಸಚಿವ ಪೆನ್ನಿ ವೊಂಗ್ ಮತ್ತು ಜಪಾನ್ ವಿದೇಶಾಂಗ ಸಚಿವ ಇವಾಯಾ ತಕೆಷಿ ಸಹ ಭಾಗವಹಿಸಲಿದ್ದಾರೆ.

><><><><><><><

ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ನೌಕಾ ಸಹಕಾರವನ್ನು ಬೆಳೆಸುವ ಮಹತ್ವದ ಹೆಜ್ಜೆಯಾಗಿ, ಭಾರತ, ಜಪಾನ್, ಅಮೆರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳ ಕರಾವಳಿ ರಕ್ಷಣಾ ಪಡೆಗಳು ಮೊದಲ ಬಾರಿಗೆ ‘ಕ್ವಾಡ್ ಅಟ್ ಸೀ ಶಿಪ್ ಅಬ್ಸರ್ವರ್ ಮಿಷನ್’ ಅನ್ನು ಪ್ರಾರಂಭಿಸಿವೆ. ವಿಲ್ಮಿಂಗ್ಟನ್ ಘೋಷಣೆಯಡಿಯಲ್ಲಿ ನಡೆಸಲಾದ ಈ ಯೋಜನೆಯಲ್ಲಿ, ಪ್ರತಿ ರಾಷ್ಟ್ರದಿಂದ ಇಬ್ಬರು ಅಧಿಕಾರಿಗಳು ಅಮೆರಿಕದ ಕೋಸ್ಟ್ ಗಾರ್ಡ್ ಕಟರ್ ಸ್ಟ್ರಾಟನ್ ನೌಕೆಯಲ್ಲಿ ಭಾಗಿಯಾಗಿದ್ದಾರೆ. ಈ ನೌಕೆ ಪ್ರಸ್ತುತ ಗುವಾಂಗೆ ಸಾಗುತ್ತಿದೆ. ಕ್ವಾಡ್ ಸದಸ್ಯರ ನಡುವೆ ಸಹಕಾರವನ್ನು ಬಲಪಡಿಸುವ ಈ ಪ್ರಯತ್ನ, ಭೌಗೋಳಿಕ ಅರಿವು, ಜಂಟಿ ಸಿದ್ಧತೆ ಮತ್ತು ಪರಸ್ಪರ ಕ್ರಿಯಾಶೀಲತೆಗೆ ಬಲ ನೀಡುವ ಉದ್ದೇಶವನ್ನು ಹೊಂದಿದೆ. ೨೦೨೪ರ ಸೆಪ್ಟೆಂಬರ್‌ನಲ್ಲಿ ನಡೆದ ಕ್ವಾಡ್ ನಾಯಕರ ಶೃಂಗಸಭೆಯ ದೃಷ್ಟಿಕೋನಕ್ಕೆ ಇದು ಅನುಗುಣವಾಗಿದೆ ಮತ್ತು ಸ್ವತಂತ್ರ, ಮುಕ್ತ, ಒಳಗೊಳ್ಳುವ ಮತ್ತು ನಿಯಮಾಧಾರಿತ ಇಂಡೋ-ಪೆಸಿಫಿಕ್‌ಗಾಗಿ ಬದ್ಧತೆಯನ್ನು ದೃಢಪಡಿಸುತ್ತದೆ. ಇದರಲ್ಲಿ ಭಾರತದ ಪಾಲುಗಾರಿಕೆ ಪ್ರದೇಶದಲ್ಲಿನ ಎಲ್ಲರಿಗೂ ಭದ್ರತೆ ಮತ್ತು ಅಭಿವೃದ್ಧಿ ಒದಗಿಸುವ ಧ್ಯೇಯದ ಸಾಗರ್ ಉಪಕ್ರಮ ಹಾಗೂ ಇಂಡೋ-ಪೆಸಿಫಿಕ್ ಮಹಾಸಾಗರ ಉಪಕ್ರಮದೊಂದಿಗೆ ಹೊಂದಿಕೆಯಾಗುತ್ತದೆ. ಇದು ಸಾಮರ್ಥ್ಯ ನಿರ್ಮಾಣ, ಮಾನವೀಯ ಕಾರ್ಯಚಟುವಟಿಕೆ ಮತ್ತು ನೌಕಾ ಕಾನೂನು ಪಾಲನೆಗೆ ಒತ್ತು ನೀಡುತ್ತದೆ.

><><><><><><><

ಭಯೋತ್ಪಾದನೆ ಎಲ್ಲಿದ್ದರೂ, ಅದು ಎಲ್ಲೆಡೆ ಶಾಂತಿಗೆ ಪ್ರಮುಖ ಬೆದರಿಕೆಯಾಗಿದೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ನ್ಯೂಯಾರ್ಕ್‌ನ ವಿಶ್ವ ಸಂಸ್ಥೆ ಪ್ರಧಾನ ಕಚೇರಿಯಲ್ಲಿ ನಡೆದ ‘ಭಯೋತ್ಪಾದನೆಯ ಮಾನವ ವೆಚ್ಚ’ ಎಂಬ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಯೋತ್ಪಾದನೆ ವಿಶ್ವಸಂಸ್ಥೆಯ ಆದರ್ಶಗಳಿಗೆ ವಿರುದ್ಧವಾಗಿದೆ. ಯಾವುದೇ ರಾಷ್ಟ್ರ ಪ್ರಾಯೋಜಿತ ಭಯೋತ್ಪಾದನೆಯನ್ನು ಬಯಲಿಗೆಳೆದು ಖಂಡಿಸಬೇಕು. ನೆರೆಹೊರೆ ರಾಷ್ಟ್ರದ ವಿರುದ್ಧ ಭಯೋತ್ಪಾದನೆ ಪ್ರೋತ್ಸಾಹಿಸುವುದು ಮತ್ತು ಸಂಬಂಧಿತ ಉಗ್ರ ಚಟುವಟಿಕೆಗಳಿಗೆ ಪುಷ್ಟಿ ನೀಡುವುದನ್ನು ಖಂಡಿಸಬೇಕು ಎಂದರು. ಪಹಲ್ಗಾಂನಲ್ಲಿ ನಡೆದ ಭೀಕರ ಉಗ್ರ ದಾಳಿಯನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿ ತೀವ್ರವಾಗಿ ಖಂಡಿಸಿರುವುದನ್ನು ಅವರು ಉಲ್ಲೇಖಿಸಿದರು. ಭಯೋತ್ಪಾದನೆಯ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳನ್ನು ಹತ್ತಿಕ್ಕುವುದು ಜಾಗತಿಕ ಸಮುದಾಯದ ಸಾಮೂಹಿಕ ಮತ್ತು ತ್ವರಿತ ಹೊಣೆಗಾರಿಕೆ ಎಂಬುದನ್ನು ಡಾ. ಜೈಶಂಕರ್ ಪುನರುಚ್ಚರಿಸಿದರು.

><><><><><><><

ಇಂದಿನಿಂದ ಜಾರಿಗೆ ಬರುವಂತೆ ರೈಲ್ವೆ ಸಚಿವಾಲಯ ಪ್ರಯಾಣಿಕ ರೈಲು ಸೇವೆಗಳ ಮೂಲ ದರವನ್ನು ಹೆಚ್ಚಳಮಾಡಿದೆ. ಹವಾನಿಯಂತ್ರಣವಲ್ಲದ ರೈಲುಗಳಿಗೆ ಪ್ರತಿ ಕಿಲೋಮೀಟರ್‌ಗೆ ಒಂದು ಪೈಸೆ ಮತ್ತು ಹವಾನಿಯಂತ್ರಿತ ರೈಲುಗಳಿಗೆ ಪ್ರತಿ ಕಿಲೋಮೀಟರ್‌ಗೆ ಎರಡು ಪೈಸೆ ದರವನ್ನು ಹೆಚ್ಚಳ ಮಾಡಲಾಗಿದೆ. ಏಕ ಪ್ರಯಾಣ ದರಗಳು ಮತ್ತು ಮಾಸಿಕ ಋತುವಿನ ಟಿಕೆಟ್‌ಗಳಲ್ಲಿ ಯಾವುದೇ ಹೆಚ್ಚಳವಿಲ್ಲ ಎಂದು ಸಚಿವಾಲಯ ತಿಳಿಸಿದೆ. ಕಾಯ್ದಿರಿಸುವ ಟಿಕೆಟ್ ಶುಲ್ಕಗಳು, ಸೂಪರ್‌ಫಾಸ್ಟ್ ಸರ್‌ಚಾರ್ಜ್‌ಗಳು ಮತ್ತು ಇತರ ಶುಲ್ಕಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಕ್ರಮ ದರ ರಚನೆಗಳನ್ನು ಸುವ್ಯವಸ್ಥಿತಗೊಳಿಸುವ ಮತ್ತು ಪ್ರಯಾಣಿಕರ ಸೇವೆಗಳ ಆರ್ಥಿಕ ಸುಸ್ಥಿರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಸಚಿವಾಲಯ ತಿಳಿಸಿದೆ. ಎರಡನೇ ದರ್ಜೆಯ ಪ್ರಯಾಣದ ದರವು ೫೦೦ ಕಿಲೋಮೀಟರ್‌ಗಳವರೆಗೆ ಬದಲಾಗದೆ ಉಳಿಯಲಿದೆ ಮತ್ತು ಅದಕ್ಕಿಂತ ಹೆಚ್ಚಿನ ದೂರಕ್ಕೆ, ಪ್ರತಿ ಕಿಲೋಮೀಟರ್‌ಗೆ ಅರ್ಧ ಪೈಸೆ ಹೆಚ್ಚಳವಾಗಿದೆ. ಪ್ರಯಾಣಿಕರು ಈಗ ೫೦೧ ರಿಂದ ೧ ಸಾವಿರದ ೫೦೦ ಕಿಲೋಮೀಟರ್‌ಗಳವರೆಗಿನ ದೂರಕ್ಕೆ ಐದು ರೂಪಾಯಿಗಳನ್ನು, ೧ ಸಾವಿರದ ೫೦೧ ರಿಂದ ಎರಡು ಸಾವಿರದ ೫೦೦ ಕಿಲೋಮೀಟರ್‌ಗಳ ನಡುವಿನ ದೂರಕ್ಕೆ ೧೦ ರೂಪಾಯಿಗಳನ್ನು ಮತ್ತು ಎರಡು ಸಾವಿರದ ೫೦೧ ರಿಂದ ಮೂರು ಸಾವಿರ ಕಿಲೋಮೀಟರ್‌ಗಳ ನಡುವಿನ ದೂರಕ್ಕೆ ೧೫ ರೂಪಾಯಿಗಳನ್ನು ಹೆಚ್ಚುವರಿಯಾಗಿ ಪಾವತಿಸಬೇಕಾಗುತ್ತದೆ. ಸಾಮಾನ್ಯ ಸ್ಲೀಪರ್ ಕ್ಲಾಸ್ ಮತ್ತು ಪ್ರಥಮ ದರ್ಜೆಯ ಪ್ರಯಾಣಿಕರು ಪ್ರತಿ ಕಿಲೋಮೀಟರ್‌ಗೆ ಅರ್ಧ ಪೈಸೆ ಹೆಚ್ಚು ಪಾವತಿಸಬೇಕಾಗುತ್ತದೆ. ಈ ದರ ಪರಿ?ರಣೆಯು ರಾಜಧಾನಿ, ಶತಾಬ್ದಿ, ದುರಂತೊ, ವಂದೇ ಭಾರತ್ ಮತ್ತು ತೇಜಸ್‌ನಂತಹ ಪ್ರೀಮಿಯರ್ ಮತ್ತು ವಿಶೇ? ರೈಲು ಸೇವೆಗಳಿಗೂ ಅನ್ವಯಿಸುತ್ತದೆ. ಇಂದಿನಿಂದ ಅಥವಾ ನಂತರ ಬುಕ್ ಮಾಡಿದ ಟಿಕೆಟ್‌ಗಳಿಗೆ ಪರಿ?ತ ದರಗಳು ಅನ್ವಯವಾಗಲಿದೆ. ಎಂದು ಸಚಿವಾಲಯ ತಿಳಿಸಿದೆ.

><><><><><><><><

ಫುಟ್ಬಾಲ್ ಕ್ರೀಡೆಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಿ, ಬಲಿಷ್ಠ ಕ್ರೀಡಾ ಸಂಸ್ಕೃತಿಗೆ ಆದ್ಯತೆ ನೀಡುವ ಉದ್ದೇಶದಿಂದ ದೇಶದಾದ್ಯಂತ ಶಾಲೆಗಳಿಗೆ ಸುಮಾರು ೧೦ ಲಕ್ಷ ಫುಟ್ಬಾಲ್‌ಗಳನ್ನು ವಿತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೋಲ್ಕತ್ತಾದ ಫೋರ್ಟ್ ವಿಲಿಯಂನಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ನಡೆದ ಫುಟ್ಬಾಲ್ ಫಾರ್ ಸ್ಕೂಲ್ಸ್ ಕಾರ್ಯಕ್ರಮದಲ್ಲಿ ಫೀಫಾ ಫುಟ್ಬಾಲ್‌ಗಳ ವಿತರಣೆಗೆ ಚಾಲನೆ ನೀಡುವ ವೇಳೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಈ ಕುರಿತಂತೆ ಘೋಷಿಸಿದ್ದಾರೆ. ಪಶ್ಚಿಮ ಬಂಗಾಳ ಒಂದರಲ್ಲೇ ಸುಮಾರು ೮೮ ಸಾವಿರ ಫುಟ್ಬಾಲ್‌ಗಳನ್ನು ವಿತರಿಸಲಾಗುತ್ತಿದ್ದು, ಇದರ ಲಾಭ ಸುಮಾರು ೧೫ ರಿಂದ ೧೬ ಲಕ್ಷ ಮಕ್ಕಳಿಗೆ ಸಿಗಲಿದೆ ಎಂದು ತಿಳಿಸಿದರು. ಈ ಯೋಜನೆಯು ಶಾಲಾ ಮಟ್ಟದಲ್ಲೇ ಕ್ರೀಡೆಗೆ ಪ್ರೋತ್ಸಾಹ ನೀಡಲು ನೆರವಾಗುವ ಜೊತೆಗೆ ರಾಷ್ಟ್ರದ ಯುವ ಜನತೆಯಲ್ಲಿ ಆರೋಗ್ಯದ ಅರಿವು, ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಲು ಸಹಕಾರಿಯಾಗಲಿದೆ ಎಂದು ಸಚಿವರು ಅಭಿಪ್ರಾಯಪಟ್ಟಿದ್ದಾರೆ.

><><><><><><><><

ಕೆನಡಾದ ಒಂಟಾರಿಯೊನಲ್ಲಿಂದು ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ ದೊರೆಯಲಿದೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ, ಭಾರತದ ಅಯುಷ್ ಶೆಟ್ಟಿ, ಕಿಡಂಬಿ ಶ್ರೀಕಾಂತ್, ಶಂಕರ್ ಸುಬ್ರಮಣಿಯನ್, ಪ್ರಿಯಾಂಶು ರಾಜಾವತ್, ಚಿರಾಗ್ ಸೇನ್ ಕಣಕ್ಕಿಳಿಯಲಿದ್ದಾರೆ. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ತಾನ್ಯಾ ಹೇಮಂತ್, ಶ್ರಿಯಾಂಶಿ ವಾಲಿಶೆಟ್ಟಿ ಹಾಗೂ ಇರಾ ಶರ್ಮಾ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. ಭಾರತದ ಅತ್ಯುತ್ತಮ ಪದಕ ನಿರೀಕ್ಷೆಗಳು ಮಿಶ್ರ ಡಬ್ಬಲ್ಸ್ ವಿಭಾಗದಲ್ಲಿದ್ದು, ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೋ ಜೋಡಿ ಟೂರ್ನಿಯ ಅಗ್ರ ಶ್ರೇಣಿಯ ಶಟ್ಲರ್‌ಗಳಾಗಿದ್ದು,

ಸ್ಪೇನ್‌ನ ರೂಬೆನ್ ಗಾರ್ಸಿಯಾ ಮತ್ತು ಲೂಸಿಯಾ ರೋಡ್ರಿಗಸ್ ವಿರುದ್ಧ ಮೊದಲ ಸುತ್ತಿನ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

><><><><><><><><><

ಬ್ರಿಸ್ಟಲ್‌ನ ಕೌಂಟಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐದು ಪಂದ್ಯಗಳ ಮಹಿಳಾ ಅಂತರರಾಷ್ಟ್ರೀಯ ಟಿ೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ಹಾಗೂ ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೧ ಗಂಟೆಗೆ ಆರಂಭವಾಗಲಿದೆ. ಈ ಹಿಂದೆ ನಾಟಿಂಗ್‌ಹ್ಯಾಮ್‌ನ ಟ್ರೆಂಟ್ ಬ್ರಿಡ್ಜ್ ಮೈದಾನದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ೯೭ ರನ್‌ಗಳ ಭರ್ಜರಿ ಗೆಲುವು ಸಾಧಿಸಿ ಸರಣಿಯಲ್ಲಿ ೧-೦ ಮುನ್ನಡೆ ಪಡೆದುಕೊಂಡಿದೆ.

><><><><><><><><><

ತೆಲಂಗಾಣದ ಸಂಗರೆಡ್ಡಿ ಜಿಲ್ಲೆಯ ಕೈಗಾರಿಕಾ ಘಟಕದಲ್ಲಿ ನಿನ್ನೆ ಸಂಭವಿಸಿದ ಭಾರಿ ಸ್ಫೋಟದಲ್ಲಿ ೧೩ ಕಾರ್ಮಿಕರು ಸಾವನ್ನಪ್ಪಿದ್ದು, ೩೪ ಮಂದಿ ಗಾಯಗೊಂಡಿದ್ದಾರೆ. ಹೈದರಾಬಾದ್‌ನಿಂದ ಸುಮಾರು ೫೦ ಕಿ.ಮೀ ದೂರದಲ್ಲಿರುವ ಪಶಮೈಲಾರಾಮ್ ಕೈಗಾರಿಕಾ ಪ್ರದೇಶದ ಸಿಗಾಚಿ ರಾಸಾಯನಿಕ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಿಂದ ಉತ್ಪಾದನಾ ಘಟಕದ ಮೂರು ಅಂತಸ್ತಿನ ಕಟ್ಟಡ ಕುಸಿದು ಭಾರಿ ಬೆಂಕಿ ಕಾಣಿಸಿಕೊಂಡಿದೆ. ಈ  ನಡುವೆ ಇನ್ನೂ ಕೆಲವು ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಶಂಕೆ ಇರುವುದರಿಂದ ಸಾವಿನ ಸಂಖ್ಯೆ ಹೆಚ್ಚಾಗಬಹುದು ಎನ್ನಲಾಗಿದ್ದು ಗಾಯಾಳುಗಳನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಅವರಲ್ಲಿ ೧೨ ಜನರ ಸ್ಥಿತಿ ಗಂಭೀರವಾಗಿದೆ.

><><><><><><><><><